ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

ದಿಃ26-06-2023

ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಎನ್ ಕೆ ವಕೀಲರಿಂದ

ನಾನು ದಾವಾದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನೇ ತಾಲ್ಲೂಕು ಮತ್ತು ನೊಂದಣಿ ಕಛೇರಿಯಿಂದ ಪಡೆದಿರುತ್ತೇನೆ. ನಾನು ದಾಖಲಾತಿಗಳನ್ನು ಪಡೆದ ದಿನಾಂಕ ನನಗೆ ನೆನಪಿಲ್ಲ. ಅದಾ ನಂಃ 124/15 ರಲ್ಲಿ ನಾನು ಮತ್ತು ನನ್ನ ಸಹೋದರಿ ಶಿಲ್ಪ ರವರು ಪಕ್ಷಗಾರರಾಗಿ ಸೇರ್ಪಡೆಯಾಗಿರುತ್ತೇವೆ. ಸದರಿ ದಾವಾ ಚಾಲ್ತಿಯಲ್ಲಿದೆ. ಸದರಿ ದಾವಾದಲ್ಲಿ ಧರ್ಮಪ್ಪ, ಸರ್ವಮಂಗಳ, ಮಲ್ಲೇಗೌಡ ಮತ್ತು ತೀರ್ಥರಾಜು ರವರು ಏನು ಏನು ತಕರಾರು ಮತ್ತು ದಾಖಲಾತಿಗಳನ್ನು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ-7 ಮ್ಯುಟೇಷನ್ ದಾಖಲಾತಿ ಪಡೆಯಲು ರವೀಂದ್ರರವರು ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ನಿಪಿ-11 ದಾನಪತ್ರದ ದೃಢೀಕೃತ ನಕಲನ್ನು ಯಾರು ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-11 ದಾಖಲಾತಿಯನ್ನು ದಾವಾ ದಾಖಲು ಮಾಡುವಾಗ ಪಡೆದಿರುತ್ತೇನೆ . ನಾನು 5 ನೇ ಪ್ರತಿವಾದಿಯ ಹೆಸರು ಮತ್ತು ಸಹಿಯನ್ನು ಫೋರ್ಜರಿ ಮಾಡಿ ನಿಪಿ-11 ದಾಖಲಾತಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದಾ ನಂಃ 124/15 ರಲ್ಲಿ ರಿಜಾಯಿಂಡರ್ ಪತ್ರ ಹಾಕಿದ ಬಗ್ಗೆ ಗೊತ್ತಿಲ್ಲ.

ದಾವಾದಲ್ಲಿ ಪ್ರತಿವಾದಿ 2, 3 ರವರು ಸಲ್ಲಿಸಿದ ತಕರಾರನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದೇನೆ. ದಾವಾ ದಾಖಲು ಮಾಡುವ ಪೂರ್ವದಲ್ಲಿ 1 ನೇ ಪ್ರತಿವಾದಿ 2 ರಿಂದ 5 ನೇ ಪ್ರತಿವಾದಿಗೆ ವಕೀಲರ ಮುಖಾಂತರ 2015 ರಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ನೋಟೀಸ್ ನೀಡಿದ್ದು ಅದಕ್ಕೆ ಪ್ರತಿವಾದಿಯರು ಪ್ರತಿ ಉತ್ತರ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ 1 ನೇ ಪ್ರತಿವಾದಿ ನೀಡಿದ ನೋಟೀಸ್ ಬಗ್ಗೆ ಹೇಳಿರುವುದಿಲ್ಲ. ನಾನು ನೋಟೀಸ್ ಬಗ್ಗೆ ನನ್ನ ವಕೀಲರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ.

ದಾವಾ ಸ್ವತ್ತು ರವೀಂದ್ರಕುಮಾರ್ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ, ಸದರಿ ಸ್ವತ್ತು ರವೀಂದ್ರಕುಮಾರ್ ರವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿದಾರರು ಒಟ್ಟು ಕುಟುಂಬಕ್ಕೆ ಮಂಜೂರಾದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 1994 ರಲ್ಲಿ 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ಅದೇ ರೀತಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಜಿ ಪಿ ಎ ಮುಖಾಂತರ ದಾವಾ ಸ್ವತ್ತನ್ನು ಕ್ರಯಪತ್ರ ಮಾಡಿಕೊಡಲು ಅಧಿಕಾರ ನೀಡಿರುತ್ತಾರೆ ಎಂದರೆ ಸರಿಯಲ್ಲ ಕರಾರು ಮಾಡುವ ಕಾಲಕ್ಕೆ 3 ನೇ ಪ್ರತಿವಾದಿಯಿಂದ 1 ನೇ ಪ್ರತಿವಾದಿಯು 38 ಸಾವಿರ ರೂ ಹಣವನ್ನು ಕರ್ನಾಟಕ ಬ್ಯಾಂಕ್, ಬೆಳಗೋಡು ಶಾಖೆಯ ಚೆಕ್ಕಿನ ಮೂಲಕ ಪಡೆದಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ದಿಃ 23-09-2000 ರಲ್ಲಿ 3 ನೇ ಪ್ರತಿವಾದಿ ಹೆಸರಿಗೆ ದಾವಾ ಅಸ್ತಿಗೆ ಸಂಬಂಧಿಸಿದಂತೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ ಕ್ರಯದ ರೀತಿ 3 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ ನನಗೆ ಗೊತ್ತಿಲ್ಲ.

ದಿಃ 21-02-2011 ರಲ್ಲಿ 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ 4 ನೇ ಪ್ರತಿವಾದಿ ದಾವಾ ಆಸ್ತಿ ಖರೀದಿ ಮಾಡುವ ಕಾಲಕ್ಕೆ ದಿನಪತ್ರಿಕೆಯಲ್ಲಿ ಪಬ್ಲಿಕ್ ನೋಟೀಸ್ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ.

ನಾನು **2006-07** ರವರೆಗೆ ನಾನು ಬೆಳಗೋಡು ಗ್ರಾಮದಲ್ಲಿ ವಾಸ ಇದ್ದೆನು, ನಂತರ ಬೆಂಗಳೂರಿನಲ್ಲಿ ವಾಸ ಇದ್ದೆನು. ಆಗ ನಮ್ಮ ತಂದೆಯವರು ನಮ್ಮ ಜೊತೆಯೇ ಇದ್ದರು. ಮೂಗ್ಲಿ ಬೆಳಗೋಡು ಹೋಬಳಿಗೆ ಸೇರುತ್ತದೆ. ಬೆಳಗೋಡಿನಿಂದ ಮೂಗ್ಲಿ **4** ಕಿ ಮೀ ಅಂತರದಲ್ಲಿ ಇದೆ. **2000** ರಲ್ಲಿ ಕ್ರಯದಂತೆ **3** ನೇ ಪ್ರತಿವಾದಿ ಹೆಸರಿಗೆ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ನಾನು ಬೆಳಗೋಡಿನಲ್ಲಿ ವಾಸ ಇದ್ದಾಗ ದಾವಾ ಅಸ್ತಿಗೆ ಸಂಬಂಧಿಸಿದ ಪಹಣಿಯನ್ನು ನೋಡಿರುವುದಿಲ್ಲ. **2005-06** ರವರೆಗೆ ನಾವು ಬೆಳಗೋಡಿನಲ್ಲಿ ವಾಸ ಇದ್ದೇವೆ ಎಂದು ಹೇಳುವ ಸಮಯದಿಂದಲೂ **3** ನೇ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿ ಪಹಣಿ ಇತ್ತು ಎಂದರೆ ಸರಿಯಲ್ಲ.

**2008-09** ರಲ್ಲಿ ನಮ್ಮ ತಂದೆಯವರಿಗೆ ಹೃದಯ ಸಂಬಂಧಿ ಖಾಯಿಲೆ ಇದೆ ಎಂದು ಗೊತ್ತಾಗಿರುತ್ತದೆ. ನಮ್ಮ ತಂದೆಯವರು ಮೂಗ್ಲಿ ಗ್ರಾಮದಲ್ಲಿ ಎಷ್ಟು ವರ್ಷಗಳ ಕಾಲ ವಾಸ ಇದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ನಮ್ಮ ತಂದೆಯವರ ಹೆಸರಿಗೆ ಮಾತ್ರ ಮಂಜೂರಾಗಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಅಸ್ತಿ ನಮ್ಮ ತಂದೆಯವರ ಸ್ವಯಾರ್ಜಿತ ಆಸ್ತಿ ಆಗಿದ್ದು ಅವರ ಇಚ್ಚೆಯಂತೆ ವಿಲೇವಾರಿ ಮಾಡಲು ಹಕ್ಕು ಇದ್ದು, ಅದರಂತೆ ಅವರು **3** ನೇ ಪ್ರತಿವಾದಿ ಹೆಸರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅಸ್ತಿಯು ನನ್ನ ತಂದೆಯವರ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಅದರಲ್ಲಿ ನಾವು ಹಿಸ್ಸೆ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು **1** ನೇ ಪ್ರತಿವಾದಿಯಾದ ನನ್ನ ತಂದೆಯವರು ಶರೀಕಾಗಿ ದಾವಾ ಸ್ವತ್ತನ್ನು ಅಕ್ರಮವಾಗಿ ಹೊಂದುವ ಉದ್ದೇಶದಿಂದ ಹಾಗೂ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವಾ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ರೊಬೋಸ್ಟಾ ಕಾಫಿ ಗಿಡಗಳು ಇದ್ದು ಅವುಗಳು ಎಷ್ಟು ಗಿಡಗಳು ಇವೆ ಮತ್ತು ಅವುಗಳ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಚಿಕ್ಕವನಾಗಿದ್ದಾಗ ದಾವಾ ಆಸ್ತಿ ಖಾಲಿ ಇತ್ತು, ನಾನು ದಾವಾ ದಾಖಲು ಮಾಡುವ ಕಾಲಕ್ಕೆ ಕಾಫಿ ಗಿಡಗಳು ಇವೆ. ಖುಷ್ಕಿ ತರಿ ಜಮೀನು ಮತ್ತು ಬೆಳೆಗಳ ಬಗ್ಗೆ ನನಗೆ ಗೊತ್ತಿಲ್ಲ. ನಾವು ಒಟ್ಟು ಕುಟುಂಬದಲ್ಲಿ ಇದ್ದು ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಅದರಲ್ಲಿ ನಮಗೆ ಹಕ್ಕು ಮತ್ತು ಹಿಸ್ಸೆ ಕೇಳುವ ಅಧಿಕಾರ ಇರುವುದಿಲ್ಲ ಮತ್ತು ದಾವಾದಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ 3 ನೇ ಪ್ರತಿವಾದಿ ಹೆಸರಿನಿಂದ 4 ನೇ ಪ್ರತಿವಾದಿ ಹೆಸರಿಗೆ ಬಂದು ನಂತರ 5 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸೃಷ್ಟಿ ಮಾಡಿದ ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು,
ಸಕಲೇಶಪುರ